ಶ್ರೀ ಎ.ಟಿ.ರಾಮಸ್ವಾಮಿ: ಉಪಾಧ್ಯಕ್ಷರೆ, ನಾನು ಪ್ರಸ್ತಾಪ ಮಾಡಲಿರುವ ವಿಷಯಕ್ಕೆ ಗೃಹ ಮಂತ್ರಿಗಳು ಉತ್ತರ ಕೊಡಬೇಕು. ಈಗ ಅವರು ಇಲ್ಲ. ಆದರೂ ಪ್ರಸ್ತಾಪ ಮಾಡಿ ಎಂದು ನೀವು ಹೇಳಿದರೆ ಪ್ರಸ್ತಾಪ ಮಾಡುತ್ತೇನೆ.

ಉಪಾಧ್ಯಕ್ಷರು: ಗೃಹ ಮಂತ್ರಿಗಳು ಬಂದ ಮೇಲೆಯೇ ಪ್ರಸ್ತಾಪ ಮಾಡಿ. ಈಗ ಬಿ.ಬಿ.ಶಿವಪ್ಪನವರು ಮಾತನಾಡಲಿ.

(ಈ) ಕಾಫಿ ಬೆಳಗಾರರಿಗೆ ಆಗಿರುವ ತೊಂದರೆ.

+ ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ): ಮಾನ್ಯ ಉಪಾಧ್ಯಕ್ಷರೆ, ಈ ಸದನದಲ್ಲಿ ಎಲ್ಲಾ ಬೆಳೆಗಳ ಬಗ್ಗೆಯೂ ನಾವು ಚರ್ಚೆ ಮಾಡುತ್ತೇವೆ. ಅತಿವೃಷ್ಟಿಯಾದಾಗ, ಅನಾವೃಷ್ಟಿಯಾದಾಗ ನಾವೆಲ್ಲಾ ರೈತರ ಬಗ್ಗೆ ಚಿಂತನೆಯನ್ನು ಮಾಡುತ್ತೇವೆ. ತೊಂದರೆಗೊಳಗಾದ ರೈತರುಗಳಿಗೆ ಪರಿಹಾರ ಧನವನ್ನು ಕೊಡುವ ದಿಕ್ಕಿನಲ್ಲಿ ಕೂಡ ನಾವು ಚಿಂತನೆ ಮಾಡಿದ್ದೇವೆ. ಕಾಫಿ ಬೆಳಗಾರರಾದ ನಾವು ಕೂಡ ಕೃಷಿಕರೇ ಆಗಿದ್ದೇವೆ. ಆದರೆ ಕೃಷಿಕರ ಪಟ್ಟಿಯಿಂದ ನಮ್ಮನ್ನು ದೂರವಿಟ್ಟಂತೆ ಕಾಣುತ್ತದೆ. ಕಾಫಿ ಬೆಳೆ ಕೂಡ ಮಳೆಯನ್ನು ಅವಲಂಬಿಸಿರತಕ್ಕಂಥ ಬೆಳೆಯೇ ಆಗಿದೆ. ಸರಿಯಾಗಿ ಕಾಫಿ ಗಿಡವನ್ನು ಸಾಕಿದರೆ 100 ವರ್ಷಗಳವರೆಗೆ ಆಯಸ್ಸು ಇದೆ. ಆ ರೀತಿಯಲ್ಲಿ 100 ವರ್ಷಗಳವರೆಗೆ ಫಲ ಕೊಡಬೇಕಾದರೆ ಆ ಗಿಡವನ್ನು ನಾವು ಮಕ್ಕಳನ್ನು ಸಾಕುವ ಹಾಗೆ ವಿಶೇಷ ಗಮನವನ್ನು ಕೊಟ್ಟು ಸಾಕಬೇಕಾಗುತ್ತದೆ. ಮಳೆ ಬಂದರೆ ಮಾತ್ರ ಫಲ ಸಿಗುತ್ತದೆ, ಇಲ್ಲದಿದ್ದರೆ ಇಲ್ಲ. ಅತಿ ಮಳೆಯಾದರೂ ಕೂಡ ನಷ್ಟವಾಗುತ್ತದೆ. ಕಾಫಿ ನಾಲ್ಕಾರು ವರ್ಷಗಳ ಹಿಂದೆ 50 ಕೆ.ಜಿ.ಗೆ 5,000-00 ಇತ್ತು. ಆದರೆ ಈಗ 50 ಕೆ.ಜಿ.ಗೆ 3,000-00 ರೂ.ಗಳಾಗಿದೆ. ಇದರ ಬೆಲೆ ಒಂದೇ ಪ್ರಮಾಣದಲ್ಲಿರದೇ ಏರುಪೇರಾಗುತ್ತಿರುತ್ತದೆ. ಇವೊತ್ತಿನ ಪರಿಸ್ಥಿತಿಯಲ್ಲಿ ಕಾಫಿ ಬೆಳೆಗಾರರಾದ ನಾವು ಭೂ ಕಂದಾಯ, ಕೃಷಿ ವರಮಾನ ತೆರಿಗೆ, ವಹಿವಾಟು ತೆರಿಗೆ ಮತ್ತು ಮಾರಾಟ ತೆರಿಗೆಯನ್ನು ಸರ್ಕಾರಕ್ಕೆ ಕೊಡುತ್ತಿದ್ದೇವೆ. ಇದರ ಜೊತೆಗೆ ಪ್ಲಾಂಟೇಷನ್‌ಗಳಲ್ಲಿ ಸುಮಾರು ನಾಲ್ಕು ಲಕ್ಷಕ್ಕಿಂತ ಹೆಚ್ಚಿನ ಜನರಿಗೆ ಉದ್ಯೋಗವನ್ನು ಒದಗಿಸಿಕೊಟ್ಟಿದ್ದೇವೆ. ಕಾರ್ಮಿಕ ಇಲಾಖೆ ಒಬ್ಬ ಕಾರ್ಮಿಕರಿಗೆ ಒಂದು ದಿನಕ್ಕೆ 43 ರೂ.ಗಳ ಕೂಲಿಯನ್ನು ಕೊಡಬೇಕೆಂದು ನಿಗದಿ ಮಾಡಿದೆ. ಆದರೆ ಆ ಕೂಲಿಗೆ ಗಂಡಾಳಾಗಲಿ ಅಥವಾ ಹೆಣ್ಣಾಳಾಗಲಿ ಕೆಲಸ ಮಾಡುವುದಕ್ಕೆ ಬರುವುದಿಲ್ಲ. ನಮ್ಮಲ್ಲಿ 70 ರೂ.ಗಳಿಂದ 80 ರೂ.ಗಳ ಕೂಲಿ ಇದೆ. ಇಷ್ಟೆಲ್ಲಾ ತೊಂದರೆಗಳಿದ್ದರೂ ಕೂಡ ನಾವು ಕಾಫಿ ಉದ್ಯಮವನ್ನು ಬೆಳೆಸಿಕೊಂಡು ಬಂದಿದ್ದೇವೆ ಮತ್ತು ಉಳಿಸಿಕೊಂಡು ಬಂದಿದ್ದೇವೆ. ಇವೊತ್ತು ಈ ಕಾಫಿ ಬೆಳೆ ಎರಡು ಸಾವಿರ ಕೋಟಿ ರೂ.ಗಳ ವಿದೇಶಿ ವಿನಿಮಯವನ್ನು ಗಳಿಸುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಬಿದ್ದ ಕೆಟ್ಟ ಮಳೆಯಿಂದಾಗಿ ಒಳ್ಳೆಯ ದರ್ಜೆಯ ಕಾಫಿ ಗಿಡವಾಗಿದ್ದರೂ ಕೂಡ ರೋಗ ಬಂದು ಗಿಡ ಮತ್ತು ಕಾಫಿ ಬೀಜ ಎರಡೂ ಹಾಳಾಗುತ್ತಿದೆ. ಹೀಗಿದ್ದರೂ

ನಾವು ನಿಮ್ಮ ಬಳಿ ಪರಿಹಾರ ಕೊಡಿ ಎಂದು ನಿಮ್ಮ ಬಳಿಗೆ ಬರುವುದಿಲ್ಲ. ಆದರೆ ನೀವು ನಮಗೆ ತೊಂದರೆ ಕೊಡುವ ಸಲುವಾಗಿ ಪುನಃ ಕಾಫಿ ಬೆಳೆಯನ್ನು ಆರ್.ಎಂ.ಸಿ. ವ್ಯಾಪ್ತಿಯೊಳಗೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಇದರ ಜೊತೆಗೆ 39- ಬಿ ಎನ್ನುವ ಫಾರ್ಮ್‌ನ್ನು ಭರ್ತಿ ಮಾಡಬೇಕೆಂದು ತಿಳಿಸಿದ್ದೀರಿ. ಈ ರೀತಿ ಮಾಡಬೇಕೆಂದು ಯಾರು ತಲೆಯನ್ನು ಉಪಯೋಗಿಸಿದರೋ ನನಗೆ ಗೊತ್ತಿಲ್ಲ. ಇದರ ಜೊತೆಗೆ ಇವರು ವಿಶೇಷವಾಗಿ ನಿಯಮವೊಂದನ್ನು ಮಾಡಿ 650 ಕೆ.ಜಿ.ಗಿಂತ ಹೆಚ್ಚಿಗೆ ಕಾಫಿಯನ್ನು ಬೆಳೆದರೆ ಪ್ರತಿ ಹೆಚ್ಚಿನ ಒಂದು ಕೆ.ಜಿ.ಗೆ ನಾವು 5-00 ರೂ.ಗಳನ್ನು ಕಟ್ಟಬೇಕೆಂದಿದ್ದಾರೆ. ಇದು ಯಾವ ರೀತಿಯ ನ್ಯಾಯ? ನಾನು ಹೇಳುವುದೇನೆಂದರೆ ಈ ವರ್ಷ ನಾನು 650 ಕೆ.ಜಿ.ಯನ್ನೇ ಬೆಳೆದರೂ ಕೂಡ ಮುಂದಿನ ವರ್ಷ ನನಗೆ 250 ಕೆ.ಜಿ. ಕಾಫಿ ಬೆಳೆಯೇ ಆಗುವುದು. ಪ್ರತಿ ವರ್ಷ ಉತ್ತಮ ಗುಣಮಟ್ಟದ ತೋಟದಲ್ಲೂ ಕೂಡ 500 ಕೆ.ಜಿ.ಯಷ್ಟೇ ಕಾಫಿ ಬೆಳೆಯನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಕಾಫಿ ಬೆಳೆಗೆ ನೀರಿನ ಸೌಲಭ್ಯವನ್ನು ಸರ್ಕಾರ ಕೊಟ್ಟಿಲ್ಲ. ಒಂದು ರೀತಿಯಲ್ಲಿ ಹೇಳಬೇಕೆಂದರೆ ಯಾವುದೇ ರೀತಿಯ ಸೌಲಭ್ಯ ಕಾಫಿ ಬೆಳೆಗಾರನಿಗೆ ಸರ್ಕಾರದಿಂದ ಸಿಕ್ಕಿಲ್ಲ. ಎಲ್ಲಾ ವ್ಯವಸ್ಥೆಯನ್ನು ಸ್ವಂತವಾಗಿಯೇ ಮಾಡಿಕೊಳ್ಳುತ್ತಿರುವ ಸ್ವತಂತ್ರ ಜೀವಿ ಕಾಫಿ ಬೆಳೆಗಾರನಾಗಿದ್ದಾನೆ. ಅವನ ಮೇಲೆ ನಿಮ್ಮ ವಕ್ರದೃಷ್ಟಿ ಏಕೆ? ಆದುದರಿಂದ ಮಾನ್ಯ ಮಂತ್ರಿಗಳಲ್ಲಿ ಬಿನ್ನವಿಸಿಕೊಳ್ಳುವುದೇನೆಂದರೆ, ನೀವು ಫಾರ್ಮ್ 39- ಬಿ ಎಂದು ಏನು ಇಂಟ್ರಡ್ಯೂಸ್ ಮಾಡಿದ್ದೀರಿ, ಅದನ್ನು ಕೈಬಿಡಬೇಕು. ಎ.ಪಿ.ಎಂ.ಸಿ.ಗೆ ಈ ಬೆಳೆಯನ್ನು ಸೇರಿಸಬೇಕು ಎಂದು ನೀವೇನು ವಿಚಾರ ಮಾಡಿದ್ದೀರಿ ಅದನ್ನು ಕೈಬಿಡಬೇಕು. 650 ಕೆ.ಜಿ.ಗಿಂತ ಹೆಚ್ಚಿಗೆ ಕಾಫಿ ಬೆಳೆದರೆ ಪ್ರತಿ ಹೆಚ್ಚಿನ ಒಂದು ಕೆ.ಜಿ.ಗೆ 5-00 ರೂ.ಗಳನ್ನು ಕಟ್ಟಬೇಕು ಎಂದು ನೀವು ಏನು ಹೇಳಿದ್ದೀರಿ ಅದನ್ನೂ ಕೂಡ ಕೈಬಿಡಬೇಕು. ಇದನ್ನು ಕೈಬಿಡದಿದ್ದರೆ ಕಾಫಿ ಬೆಳಗಾರ ಟ್ಯಾಕ್ಸ್ ಕಟ್ಟುವುದರಲ್ಲಿ ಕಳ್ಳತನ ಮಾಡಲು ನೀವು ಅನುವು ಮಾಡಿಕೊಟ್ಟ ಹಾಗೆ ಆಗುತ್ತದೆ. ಇವೊತ್ತಿನ ಪರಿಸ್ಥಿತಿಯಲ್ಲಿ ತೆರಿಗೆ ಕಟ್ಟುವುದರಲ್ಲಿ ಕಳ್ಳತನ ಮಾಡದೇ ತೆರಿಗೆ ಕಟ್ಟುತ್ತಿರುವುದು ಕಾಫಿ ಬೆಳೆಗಾರರು. ಕಾಫಿ ಬೆಳೆ ಪ್ರತಿಯೊಂದು ಎಕರೆಯಲ್ಲೂ ಸಮ ಪ್ರಮಾಣದಲ್ಲಿ ಬರುವುದಿಲ್ಲ. ಒಂದು ಎಕರೆಯಲ್ಲಿ 650 ಕೆ.ಜಿ. ಎಕರೆಗೆ ಬಂದರೆ ಮತ್ತೊಂದು ಎಕರೆಯಲ್ಲಿ 300 ಕೆ.ಜಿ. ಬರುತ್ತದೆ, ಆಗ ನಿಮಗೆ ಲೆಕ್ಕ ತೋರಿಸಲು ಜಾಸ್ತಿ ಬೆಳೆದಿರುವುದನ್ನು ಕಮ್ಮಿ ಬೆಳೆದಿರುವ ಲೆಕ್ಕಕ್ಕೆ ತೋರಿಸಬೇಕಾಗುತ್ತದೆ. ಆದುದರಿಂದ ಈ ನಿಯಮವನ್ನು ನೀವು ಕೈಬಿಡಬೇಕು. ಇವೆಲ್ಲಾ ವಿಚಾರಗಳನ್ನು ತಾವು ಗಮನದಲ್ಲಿಟ್ಟುಕೊಂಡು ಇತ್ತೀಚೆಗೆ ಮಾಡಿರುವ ಈ ಎಲ್ಲಾ ನಿಯಮಗಳನ್ನು ಕೈಬಿಡಬೇಕು. ಇನ್ನು ಪರಿಸರ ಇಲಾಖೆಯವರು ಒಂದು ಫಾರ್ಮ್‌ನ್ನು ನಮಗೆ ಕಳುಹಿಸಿದ್ದಾರೆ. ಅಧ್ಯಕ್ಷರೆ, ಕಾಫಿ ಹಣ್ಣನ್ನು ತೆಗೆದು ಕಾಫಿ ಬೇಳೆ ಮಾಡಬೇಕಾದರೆ ಆ ಪ್ರೋಸಸ್‌ನಲ್ಲಿ ನೀರನ್ನು ಉಪಯೋಗಿಸುತ್ತೇವೆ. ಆ ನೀರನ್ನು ಕಾಲುವೆಯಲ್ಲಿ ಹರಿಯುವ ನೀರಿಗೆ ಕೆಲವರು ಬಿಟ್ಟುಬಿಡುತ್ತಾರೆ. ಇದೇ ರೀತಿ ಹೊಳೆ ಅಥವಾ ಕೆರೆಗೆ ಬಿಟ್ಟುಬಿಡುತ್ತಾರೆ. ಇದರಿಂದ ನೀರು ಕೆಟ್ಟು ಜನರಿಗೆ ತೊಂದರೆಯಾಗುತ್ತದೆ

ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ತಪ್ಪಿಸುವುದಕ್ಕೆ ಏನು ಕ್ರಮವನ್ನು ಪರಿಸರ ಇಲಾಖೆಯವರು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳದೇ ಒಂದು ಫಾರ್ಮನ್ನು ನಮಗೆ ಕಳುಹಿಸಿದ್ದಾರೆ, ಅದನ್ನು ಭರ್ತಿ ಮಾಡುವುದಕ್ಕೆ ಸಾಧ್ಯವೇ ಇಲ್ಲ, ಮತ್ತೆ ಅದರಲ್ಲಿರುವಂತೆ ನಡೆದುಕೊಳ್ಳುವುದಕ್ಕೂ ಸಾಧ್ಯವಿಲ್ಲ. ಇದನ್ನು ಭರ್ತಿ ಮಾಡಿಲ್ಲವೆನ್ನುವ ಒಂದೇ ಕಾರಣಕ್ಕೆ ಮತ್ತು ಲೈಸೆನ್ಸ್ ತೆಗೆದುಕೊಂಡಿಲ್ಲವೆಂದು ತಿಳಿಸಿ ನಮ್ಮ ಮೆಷಿನರಿಗಳನ್ನು ಇಲಾಖೆಯವರು ಜಪ್ತಿ ಮಾಡಿದ್ದಾರೆ, ಕೆಲವು ಪ್ಲಾಂಟರ್‌ಗಳ ಮೇಲೆ ಕೇಸ್‌ಗಳನ್ನು ದಾಖಲೆ ಮಾಡಿದ್ದಾರೆ ಈ ರೀತಿಯಲ್ಲಿ ನೀವು ಮಾಡುತ್ತಾ ಹೋದರೆ ಕಾಫಿ ಉದ್ಯಮಕ್ಕೆ ಪೆಟ್ಟು ಬೀಳುತ್ತದೆ. ಇಡೀ ದೇಶದಲ್ಲಿ ಹೆಚ್ಚು ಕಾಫಿಯನ್ನು ನಮ್ಮ ಕರ್ನಾಟಕ ರಾಜ್ಯ ಬೆಳೆಯುತ್ತಿದೆ. ಸುಮಾರು 2 ಸಾವಿರ ಕೋಟಿ ವಿದೇಶಿ ವಿನಿಮಯ ಗಳಿಸಲು ನೆರವಾಗುವ ಕಾಫಿ ಬೆಳೆಗಾರರ ಮೇಲೆ ತಮ್ಮ ವಕ್ರ ದೃಷ್ಟಿ ಬೀಳುವುದು ಬೇಡ. ನಾಣಯ್ಯನವರು ಈಗ ಇಲ್ಲ. ಏಕೆಂದರೆ ಕಾಫಿ ಬೆಳೆಯುವ ಪ್ರದೇಶದಿಂದ ನಾಣಯ್ಯನವರು ಬಂದಿರುವುದು. ಅವರು ಈ ಬಗ್ಗೆ ಚಿಂತನೆ ಮಾಡಬೇಕು. ಈಗ ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ನಾನು ಮೇಲೆ ಹೇಳಿರುವ ಕ್ಲಿಷ್ಟನಿಯಮಗಳನ್ನು ವಜಾ ಮಾಡಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ಕಾಫಿ ಬೆಳೆಗಾರರ ಮೇಲೆ ಒಳ್ಳೆಯ ದೃಷ್ಟಿ ಇದೆ. ವಕ್ರದೃಷ್ಟಿ ಇಲ್ಲ. ಕಾಫಿ ಬೆಳೆಗಾರರ ಮೇಲೆ ಒಳ್ಳೆಯ ದೃಷ್ಟಿ ಇಟ್ಟುಕೊಂಡು ಹಿಂದೆ 8 ಪರ್ಸಂಟ್ ಇದ್ದ ತೆರಿಗೆಯನ್ನು 4 ಪರ್ಸಂಟ್‌ಗೆ ಇಳಿಸಿದ್ದೇವೆ. ಕಾಂಪೌಂಡಿಂಗ್ ಮಾಡುವಂಥದ್ದು 25 ಎಕರೆಗೆ ಇದ್ದುದನ್ನು 50 ಎಕರೆಗೆ ಮಾಡಿದ್ದೇವೆ. ಕಾರ್ಪೊರೇಟ್ ಟ್ಯಾಕ್ಸ್ 60 ಪರ್ಸಂಟ್ ಇದ್ದುದನ್ನು ಕಡಿಮೆ ಅಂದರೆ 50 ಪರ್ಸಂಟ್‌ಗೆ ಮಾಡಿದ್ದೇವೆ. ಇನ್ನು ಎಕರೆಗೆ 650 ಕೆ.ಜಿ.ಗಿಂತ ಹೆಚ್ಚಿಗೆ ಕಾಫಿ ಬೆಳೆದವರಿಗೆ ಒಂದು ಕೆ.ಜಿ.ಗೆ ರೂ.5ರಂತೆ ಸರ್ಕಾರಕ್ಕೆ ಕೊಡಬೇಕೆಂದು ಹೇಳಿದ್ದೇವೆ. ಕಾಫಿ ಬೆಳೆಗಾರರಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ಇದನ್ನು ಮಾಡಿಲ್ಲ. ಇದರಲ್ಲಿ ಸಾಕಷ್ಟು ಜನರು ಪ್ರಾಮಾಣಿಕವಾಗಿ ತೆರಿಗೆ ಕೊಡುವವರು ಇದ್ದಾರೆ. ಆದರೂ ಕೆಲವರು ಒಂದೊಂದು ಸಲ ತೆರಿಗೆ ಕೊಡದವರು ಇದ್ದರೆ ಎನ್ನುವ ಉದ್ದೇಶದಿಂದ ಮಾಡಿದ್ದೇವೆ. ಒಂದು ಎಕರೆಗೆ ಗರಿಷ್ಟ ಎಷ್ಟು ಕೆ.ಜಿ. ಕಾಫಿ ಬೆಳೆಯಬಹುದು ಎಂದು ಯಾರೋ ಒಬ್ಬರನ್ನು ಕೇಳಿದ್ದಕ್ಕೆ ಹೆಚ್ಚು ಎಂದರೆ 500 ರಿಂದ 600 ಕೆ.ಜಿ. ಬೆಳೆಯಬಹುದು ಎಂದು ಹೇಳಿದರು. ಅದಕ್ಕಿಂತ ಹೆಚ್ಚಿಗೆ ಯಾರೂ ಬೆಳೆಯುವುದಕ್ಕೆ ಸಾಧ್ಯವೇ ಇಲ್ಲ ಎಂದು ಹೇಳಿದರು. ಅದಕ್ಕೋಸ್ಕರ 650 ಕೆ.ಜಿ. ಬೆಳೆದವರು ಕೆ.ಜಿ.ಒಂದಕ್ಕೆ 5 ರೂ.ನಂತೆ ಕೊಡಬೇಕೆಂದು ಮಾಡಿದೆವು. ಈಗ ಯಾರಾದರೂ ಈ ರೂಪದಲ್ಲಿ ತೆರಿಗೆಯನ್ನು ಕೊಟ್ಟಿದ್ದಾರೆಯೇ? ನಾವು ಒಂದು ರೂಪಾಯಿಯನ್ನು ಕೂಡ ಕಲೆಕ್ಟ್ ಮಾಡಿಲ್ಲ. ಕಾಫಿ ಬೆಳಗಾರರ ವಾರ್ಷಿಕ ಕಾನ್‌ಫರೆನ್ಸ್‌ನಲ್ಲಿ ಕೂಡ ಈ ವಿಚಾರವನ್ನು ಅವರು ಹೇಳಿದ್ದಾರೆ. ಮುಂದಿನ ಆಯವ್ಯಯ ಮಂಡಿಸತಕ್ಕಂಥ ಸಂದರ್ಭದಲ್ಲಿ ಇದನ್ನು ಪರಿಶೀಲನೆ ಮಾಡುತ್ತೇನೆಂದು

ಹೇಳಿದ್ದೇನೆ. ಇನ್ನು 39 'ಬ' ಘಾರಂ- ಇದು ಮೂವ್‌ಮೆಂಟ್‌ಗೋಸ್ಕರ ಇರತಕ್ಕಂಥ ಒಂದು ಘಾರಂ ಆಗಿರುತ್ತದೆ. ಈ ಘಾರಂ ಇರುವುದರಿಂದ - ' ನಮಗೆ ತೊಂದರೆಯಾಗುತ್ತದೆ, ಅಧಿಕಾರಿಗಳಿಗೆ ಕಿರುಕುಳ ಆಗುತ್ತದೆ' ಅನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಹೇಳಿದರು. ಈ ಎರಡೂ ವಿಚಾರಗಳನ್ನು ಸಹಿತ ನಾನು ಪರಿಶೀಲನೆ ಮಾಡುತ್ತೇನೆ. 11-11-98ಕ್ಕೆ ಕಾಫಿ ಬೆಳೆ ಎಪಿಎಂಸಿಗೆ ಒಳಪಡುತ್ತದೆ ಎಂದು ಆದೇಶ ಹೊರಡಿಸಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಇದು ಬಹುಶಃ ಯಾವ ಕಾರಣಕ್ಕೋಸ್ಕರ ಮಾಡಿದ್ದಾರೋ ಗೊತ್ತಿಲ್ಲ. ಸಂಬಂಧಪಟ್ಟ ಮಂತ್ರಿಗಳ ಜೊತೆ ಚರ್ಚೆ ಮಾಡಿ ನಂತರ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಉಪಾಧ್ಯಕ್ಷರೆ, ಕಾಫಿ ಸಂಸ್ಕರಣ ಮಾಡುವ ಸಲುವಾಗಿ ಪರಿಸರ ಇಲಾಖೆಯವರು ಒಂದು ಘಾರಂನ್ನು ಕಳುಹಿಸಿಕೊಟ್ಟಿದ್ದಾರೆ. ಅದನ್ನು ಭರ್ತಿ ಮಾಡುವುದಕ್ಕೆ ಸಾಧ್ಯವಿಲ್ಲ, ಮತ್ತು ಅದರಂತೆ ನಡೆದುಕೊಳ್ಳಲೂ ಸಾಧ್ಯವಿಲ್ಲ. ಲೈನೆನ್ಸ್ ತೆಗೆದುಕೊಳ್ಳುತ್ತೇವೆ. ಅದರ ಬಗ್ಗೆ ನಮ್ಮ ತಕರಾರು ಇಲ್ಲ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವ ವಿಚಾರದ ಬಗ್ಗೆ ಸಂಬಂಧಪಟ್ಟವರಿಗೆ ಸರಿಪಡಿಸುವುದಕ್ಕೆ ಹೇಳುತ್ತೇನೆ.

(ಉ) ಕರ್ನಾಟಕ ಸಣ್ಣಕೈಗಾರಿಕೆ ಮಾರುಕಟ್ಟೆ ನಿಗಮದ ಮೂಲಕ ಪರಿಶಿಷ್ಟ ಜಾತಿ: ಪಂಗಡಗಳ ಅಭಿವೃದ್ಧಿ ನಿಗಮದವರು ಸಬ್‌ಮರ್ಸಿಬಲ್ ಪಂಪು ಸೆಟ್ಟುಗಳನ್ನು ಖರೀದಿಸುತ್ತಿರುವುದು.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಸಣ್ಣ ಕೈಗಾರಿಕಾ ಮಾರುಕಟ್ಟೆ ನಿಗಮ, ಈ ನಿಗಮದ ಮೂಲಕ ಎಸ್‌ಸಿ: ಎಸ್‌ಟಿ ಕಾರ್ಪೊರೇಷನ್‌ಗೆ ಸಬ್‌ಮರ್ಸಿಬಲ್ ಪಂಪುಸೆಟ್ಟುಗಳನ್ನು ಖರೀದಿ ಮಾಡುವುದಕ್ಕೆ ಹೊರಟಿದ್ದಾರೆ. ಈ ಸರಕುಗಳನ್ನು ಖರೀದಿ ಮಾಡುವ ಸಲುವಾಗಿ ಈಗಾಗಲೇ 6 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಮತ್ತು ಈ ಸದನದ ಅಧಿವೇಶನ ಮುಗಿದ ಮೇಲೆ 9 ಕೋಟಿ ರೂಪಾಯಿ ಬೆಲೆಯ ಸರಕುಗಳನ್ನು ಖರೀದಿ ಮಾಡಬೇಕೆಂದು ನಿರ್ಧರಿಸಿದ್ದಾರೆ. ಸರ್ಕಾರದ ನೀತಿ ಪ್ರಕಾರ ಕರ್ನಾಟಕ ಸಣ್ಣ ಕೈಗಾರಿಕೆ ಮಾರುಕಟ್ಟೆ ನಿಗಮದ ಮೂಲಕ ಪರ್‌ಚೇಸ್ ಮಾಡುವುದಕ್ಕೆ, ವ್ಯಾಪಾರ ಮಾಡುವುದಕ್ಕೆ ಯಾವುದೇ ಅಧಿಕಾರ ಇಲ್ಲ. ಅಂಥದ್ದರಲ್ಲಿ ಈ ಎಸ್.ಸಿ: ಎಸ್‌ಟಿ ಕಾರ್ಪೋರೇಷನ್‌ನವರು ಸರ್ಕಾರದ ನೀತಿ ನಿಯಮಗಳನ್ನು ಗಾಳಿಗೆ ತೂರಿ ಯಾರನ್ನೂ ಸಹ ಟೆಂಡರಿಗೆ ಕರೆಯದೆ ಅಲ್ಲಿಯ ಮ್ಯಾನೇಜರ್ ಆಗಿರತಕ್ಕಂಥವರು, ವ್ಯವಸ್ಥಾಪಕ ನಿರ್ದೇಶಕರಾಗಿರತಕ್ಕಂಥವರು ಕೋಟ್ಯಾಂತರ ರೂಪಾಯಿಗಳ ಸರಕುಗಳನ್ನು ಕೊಂಡುಕೊಳ್ಳುವುದಕ್ಕೆ ನಿರ್ಧರಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಗಮನಕ್ಕೆ ಬಂದಿದ್ದರೆ ಪರ್‌ಚೇಸ್ ಮಾಡುವುದನ್ನು ತಡೆಹಿಡಿದಿದ್ದೀರಾ? ಈಗಾಗಲೇ ನಿಮ್ಮ ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯವರು ಒಂದು